O.S **12/2019**

D.W.7

ಸಾಕ್ಷಿಯನ್ನು ದಿಃ 29-11-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಜಿ.ವಿ.ಎಮ್. ವಾದಿ ಪರ ವಕೀಲರಿಂದ

ನಾನು ಜಮೀನನ್ನು ಬಾಪುಜಿ ಶಂಕ್ರಪ್ಪರವರಿಂದ ಖರೀದಿ ಹಿಡಿದಿರುತ್ತೇನೆ ಬಾಪೂಜಿಯವರು ಚನ್ನಪ್ಪ ಕೋಲಕಾರ ಇವರಿಂದ ಖರೀದಿ ಹಿಡಿದಿರುತ್ತಾರೆ. ಚನ್ನಪ್ಪ ಕೋಲಕಾರ ಚೋಟಗಲ್ ಅವರಿಂದ ಜಮೀನನ್ನು ಖರೀದಿ ಹಿಡಿದಿರುತ್ತಾರೆ. ಚೋಟಗಲ್ ಕುಟುಂಬದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದ್ಯಾಮಪ್ಪ ಪಾನಿಗಟ್ಟಿ ಇವರ ಕುಟುಂಬದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ದ್ಯಾಮಪ್ಪನ ತಂದೆಯ ಹೆಸರು ಠಾಕಪ್ಪ ಎಂದರೆ ಸರಿ. ದ್ಯಾಮಪ್ಪನಿಗೆ ಇಬ್ಬರೂ ಸಹೋದರಿಯರು ಇರುತ್ತಾರೆಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಖರೀದಿ ಮಾಡುವ ವೇಳೆ ದ್ಯಾಮಪ್ಪನ ಸಹೋದರಿಯರ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ನಾನು ಆಸ್ತಿಯನ್ನು ಖರೀದಿ ಹಿಡಿಯುವ ವೇಳೆ ಖರೀದಿ ಹಿಡಿದ ಜಮೀನಿನ ಡ ಹಾಗೂ ಉತಾರನ್ನು ಪರಿಶೀಲಿಸಿರುತ್ತೇನೆ . ಡ ದಲ್ಲಿ ಬರೆದಿರುವ ವಿಚಾರದ ಬಗ್ಗೆ ಈಗ ನನಗೆ ನೆನಪಿರುವುದಿಲ್ಲ. ಖರೀದಿ ಹಿಡಿಯುವ ವೇಳೆ ನಾನು ನೋಟಿಸನ್ನು ನೀಡಿರುವುದಿಲ್ಲ. ಠಾಕಪ್ಪನ ಇಬ್ಬರೂ ಹೆಣ್ಣು ಮಕ್ಕಳ ಬಗ್ಗೆ ಖರೀದಿ ಕಾಲಕ್ಕೆ ವಿಚಾರ ಗೊತ್ತಿದ್ದರೂ ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ಸರ್ವೆ ನಂ. 2/8 ಊರ ಸಮೀಪ ಇದೆ ಎಂದರೆ ಸರಿ. ಆದ್ದರಿಂದ ಅದರ ಬೆಲೆ ಜಾಸ್ತಿ ಇರುತ್ತದೆ ಎಂದರೆ ಸರಿಯಲ್ಲ. ವಾದಿಗಳ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಪ್ರತಿವಾದಿಯರೊಂದಿಗೆ ಸ್ವಾಮಿಲಾಗಿ ಖೊಟ್ಟಿ ಖರೀದಿ ಪತ್ರವನ್ನು ಸೃಷ್ಟಿಸಿರುತ್ತೇನೆಂದರೆ ಸರಿಯಲ್ಲ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ

ಮರು ವಿಚಾರಣೆ ಇಲ್ಲ**.**

**(**ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**.)**

ಓದಿ ಹೇ ಕೇ ಸರಿ ಅದೆ.

Sd/-29.11.2025

ಹಿರಿಯ ದಿವಾಣಿ ನ್ಯಾಯಾಧೀಶರು

ಸಾಕ್ಷಿದಾರರ ಸಹಿಃ Sd/-

ಹಾಗೂ ಪ್ರ.ದ.ನ್ಯಾ.ದಂ. ಲಕ್ಷ್ಮೇಶ್ವರ